ಯೋಗವಿದ್ಯೆಯನ್ನು ಹೇಳಿಕೊಟ್ಟರು. ತಾಯಿ ಪ್ಲೇಗಿನಲ್ಲಿ ಅಕಾಲ ಮೃತ್ಯುವಿಗೆ ಈಡಾದ ಪ್ರಕರಣವು ತಾರಾನಾಥರನ್ನು ವೈದ್ಯರಾಗಲು ಪ್ರೇರಿಸಿರುವ ಸಾಧ್ಯತೆಯಿದೆ. ಅವರು ಇನ್‌ಫ್ಲುಯೆಂಜಾ ಬೇನೆ ಹರಡಿದ ಸಂದರ್ಭದಲ್ಲಿ (ರಾಯಚೂರು: 1920), ತಮ್ಮ ಶಿಷ್ಯರನ್ನು ಕಟ್ಟಿಕೊಂಡು ರೋಗಿಗಳ ಸೇವೆ ಮಾಡಿದರು. ಪ್ರೇಮಾಯತನದಲ್ಲಿ ಕುಷ್ಠ ಮೊದಲಾದ ಅಂಟುರೋಗಿಗಳಿಗೆ ಪ್ರತ್ಯೇಕ ಗುಡಿಸಲು ಹಾಕಿ ಕ್ವಾರಂಟೈನಿನಲ್ಲಿ ಇಡಲಾಗುತ್ತಿತ್ತು ಹಾಗೂ ರೋಗಿ ಗುಣಮುಖನಾದ ಬಳಿಕ ಆ ಗುಡಿಸಲನ್ನು ಸುಡಲಾಗುತ್ತಿತ್ತು ಎಂದು ತಿಳಿದುಬರುತ್ತದೆ. ಪ್ರೇಮಾಯತನವು ಆಸ್ಪತ್ರೆಯ ಸಮೇತ ಒಂದು ವೈದ್ಯಕೀಯ ಶಿಕ್ಷಣ ಕೇಂದ್ರವಾಗಿತ್ತು. ಇಲ್ಲಿ ವಿದ್ಯಾರ್ಥಿಗಳು ಯೋಗ, ಮತ್ತು ಆಯುರ್ವೇದವನ್ನು ಒಟ್ಟಿಗೆ ಕಲಿಯುತ್ತಿದ್ದರು. ಯೋಗಸಾಧಕರು, ರೋಗಿಗಳು, ವೈದ್ಯರು, ವಿದ್ಯಾರ್ಥಿಗಳು ಒಟ್ಟಿಗೆ ವಾಸಿಸುತ್ತಿದ್ದರು. ಇಲ್ಲಿನ ವೈದ್ಯಕೀಯ ಚಿಕಿತ್ಸೆಯ ವಿಧಾನಗಳನ್ನು ತಿಳಿಯಲು ಯುರೋಪಿನ ದೇಶಗಳಿಂದ ತಜ್ಞರು ಆಗಮಿಸುತ್ತಿದ್ದರು. ತಾರಾನಾಥರ 'ರಸಸಿದ್ಧೌಷಧಿ' 'ಸುಲಭ ಚಿಕಿತ್ಸೆ' ಎಂಬ ಎರಡು ಕೃತಿಗಳು ಪ್ರೇಮಾಯತನದಿಂದ ಪ್ರಕಟವಾದವು. ಇವು, ಕಳೆದುಹೋದ ದೇಶೀ ವೈದ್ಯಪದ್ಧತಿಯನ್ನೂ, ಅದನ್ನು ನಿರೂಪಿಸುವ ಅಪೂರ್ವವಾದ ಭಾಷೆಯನ್ನೂ ಒಳಗೊಂಡಿದ್ದು, ಕುತೂಹಲಕರವಾಗಿವೆ. ತಾರಾನಾಥರಿಗೆ ಕರ್ನಾಟಕ ಆಯುರ್ವೇದ ಸಮ್ಮೇಳನ (ರಾಯಚೂರು: 1934) ಅಖಿಲ ಭಾರತ ಆನುವಂಶಿಕ ವೈದ್ಯರ ಸಮ್ಮೇಳನ (ಬೆಂಗಳೂರು: 1938) ಅಧ್ಯಕ್ಷತೆಗಳ ಗೌರವ ಸಿಕ್ಕಿತು. ಪ್ರೇಮಾಯತನದ ವೈದ್ಯಕೀಯ ಮತ್ತು ಸಾಮಾಜಿಕ ಪ್ರಯೋಗಗಳನ್ನು, ತಾರಾನಾಥರ ಸಮಕಾಲೀನರಾದ ಸಂಪ್ರದಾಯವಾದಿಗಳು ತಾತ್ಸಾರದಲ್ಲಿ ನೋಡುತ್ತಿದ್ದರಂತೆ. ತಮ್ಮದೊಂದು ಸಂದರ್ಶನದಲ್ಲಿ ರಾಜೀವ ಅವರು ಆಶ್ರಮವನ್ನು ಕುರಿತು ಹೀಗೆ ಹೇಳುತ್ತಾರೆ:

"ಪ್ರೇಮಾಯತನವನ್ನು ಈ ಸಂಪ್ರದಾಯವಾದಿಗಳೆಲ್ಲ 'ಪ್ರೇಮಯಾತನೆ' ಅಂತ ಲೇವಡಿ ಮಾಡ್ತಿದ್ದರು. ಅದು ಆಸ್ಪತ್ರೆ. ಅಲ್ಲಿ ಹುಚ್ಚು ಹಿಡಿದವರು, ಕುಷ್ಠ ಬಂದಿರೋರು, ಸಮಾಜಬಾಹಿರರಾದವರು, ಮದುವೆಯಿಲ್ಲದೆ ಬಸುರಾದವರು ಇರತಾ ಇದ್ರು. ಒಂದು ಪ್ರಸಂಗ ನೆನಪಿಸಿಕೊಂಡರೆ ಇನ್ನೂ ಮೈಯೆಲ್ಲ ಝುಂ ಅಂತದೆ. ನನಗೆ ಐದು ವರ್ಷ ಇರಬಹುದು. ನಮ್ಮಪ್ಪನ ಜತೀಗೆ ತಳಗೆ ಮಲಕ್ಕೋತಿದ್ದೆ ವರಾಂಡದೊಳಗ. ಅಲ್ಲಿ ಒಂದು ಕಂದೀಲು ಇರತಿತ್ತು. ಅದರಾಚೆ ಕತ್ತಲು. ಆ ಕತ್ತಲೊಳಗ ಓಓ ಅಂತ ಒಬ್ಬ ಕಿರುಚುತಿದ್ದ. ಅವನನ್ನ ಇಬ್ಬರು ಹಿಡಕೊಂಡು ಬಂದ್ರು–ಅಂಥಾ ಹುಚ್ಚ ಅಂವ. ಆಗ ನಮ್ಮಪ್ಪ ನಮ್ಮನೆಲ್ಲ ಎಬ್ಬಿಸಿಬಿಟ್ರು. 'ಏ! ಕೂಗಬ್ಯಾಡ ಬಾರೋ ಇಲ್ಲಿ, ಮಲ್ಕೊ' ಅಂತ ಅವನನ್ನ ಕರದು, ತಮ್ಮ ಬ್ಲಾಂಕೆಟ್‌ನೊಳಗ ಮಲಗಿಸಿಕೊಂಡು ಬಿಟ್ರು. ಹುಚ್ಚರಿಗೆ ನಿದ್ದಿ ಬರೋದಿಲ್ಲ, ಚಡಪಡಸ್ತಿರ್ತಾರ. ಅವರಿಗಿ ಸ್ವಲ್ಪ ನಿದ್ದಿ ಬಂತಂದ್ರೆ ಗುಣ ಆಗತಾ ಇದೆ ಅಂತ ಅರ್ಥ. ಅವನಿಗೆ ನಿದ್ದೆ ಹತ್ತಿಬಿಡ್ತು."

ಪ್ರೇಮಾಯತನವು ತಬ್ಬಲಿಗಳ ಆಶ್ರಯತಾಣವಾಗಿತ್ತು.

## ಉದ್ಯಮಶೀಲತೆ

ಪ್ರೇಮಾಯತನದ ಭಾಗವಾಗಿದ್ದ 'ಪ್ರೇಮ ವಿದ್ಯಾಪೀಠ'ದ ಅಧಿಕೃತ ಚಿಹ್ನೆಯಲ್ಲಿ 'ಜ್ಞಾನ ಸಯಾಂಬಿತಾ ವಿದ್ಯಾ ಸರ್ವಲೋಕ ವಿಕಾಶಿನಿ' ಎಂದು ಬರೆದಿದೆ. ಅದರಲ್ಲಿ ಮಹಿಳೆಯೊಬ್ಬಳು ಕೈಗಳಲ್ಲಿ ಪುಸ್ತಕ ಕಸಬರಿಗೆ ಮತ್ತು ಪ್ರನಾಳವನ್ನು ಹಿಡಿದಿರುವ ಚಿತ್ರವಿದೆ. ವಿದ್ಯೆಯ ಜತೆ ಬದುಕಿಗೆ ಬೇಕಾದ ಕುಶಲತೆಯನ್ನೂ ಕಲಿಯಬೇಕೆಂಬುದು ಪ್ರೇಮಾಯತನದ ನಿಯಮ. ಹಮ್‌ದರ್ದ್ ಶಾಲೆಯಲ್ಲೂ ಅಕ್ಷರ ವಿದ್ಯೆಯ ಜತೆಗೆ ಬಡಗಿತನ ಮತ್ತು ಸಂಗೀತ ಕಲಿಸಲಾಗುತ್ತಿತ್ತು. ಓದು ಬರೆಹಕ್ಕೆ ದುಡಿಮೆ ಶ್ರಮಗಳ ಸಹಯೋಗವಿಲ್ಲದೆ ಹೋದರೆ, ಅಕ್ಷರಜ್ಞಾನ ರಾಕ್ಷಸವಾಗುತ್ತದೆ